

ಜೆರುಸಲೇಮ್ ಸುತ್ತುವರಿದ ಗೋಡೆಗಳು



ಟೆಲ್ ಅವೀವ್‌ನ 'ಬೆನ್ ಗುರಿಯನ್ ಅಂತರರಾಷ್ಟ್ರೀಯ ವಿಮಾನನಿಲ್ದಾಣ'ದಿಂದ ಒಂದು ತಾಸು ಕ್ರಮಿಸಿ, ಜೆರೂಸಲೇಮ್‌ನ 'ಕ್ರೌನ್ ಪ್ಲಾಝಾ' ಹೋಟೆಲ್ ತಲುಪಿದಾಗ ಕೊರೆಯುವ ಚಳಿ (ತಾಪಮಾನ 4 ಡಿ.ಸೆ). ಮುಂಬೈ ವಿಮಾನನಿಲ್ದಾಣದಲ್ಲಿ ಹಿಂದಿನ ದಿನ ನಡೆದ ತಪಾಸಣೆ, ವಿಚಾರಣೆ ರಗಳೆ ನೋಡಿದರೆ 'ಇಸ್ರೇಲಿಗೆ ನಾವು ಕಾಲಿಡುವುದೇ ಡೌಟು' ಎಂದು ರಾಜಸ್ಥಾನದ ಪತ್ರಕರ್ತ ಮಿತ್ರ ಸಿ.ಎಸ್. ಜೈನ್ ಪಿಸುಗುಟ್ಟಿದ್ದರು. ಅಧಿಕಾರಿಗಳು ಕೇಳಿದ ಹತ್ತಾರು ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಟ್ಟು ಕೊನೆಗೂ `ಡಿಪಾರ್ಚರ್ ಲಾಂಜ್'ಗೆ ಬಂದು ನಿಟ್ಟುಸಿರು ಬಿಟ್ಟಿದ್ದೆವು.

ವಿಮಾನಯಾನದ ದಾರಿ ನೇರ ಗೀರು ಕೊರೆದಂತೆ ಎಂಬುದೊಂದು ಭಾವನೆ. ಆದರೆ ಅರಬ್ಬಿ ಸಮುದ್ರದುದ್ದಕ್ಕೂ ಹಾರುತ್ತಿದ್ದ 'ಅಲ್–ಎಲ್ ಏರ್‌ಲೈನ್ಸ್' ವಿಮಾನ, ಒಮ್ಮೆಲೇ ಎಡಕ್ಕೆ ಬಲಕ್ಕೆ ಓಲಾಡುತ್ತ ಸಾಗಿತು. ಗಗನಸಖಿನನ್ನು ಕರೆದು 'ಇಷ್ಟು ಯಾಕೆ ತಿರುವು' ಎಂದು ಕೇಳಿದಾಗ, 'ಇಸ್ರೇಲ್ ತಲುಪಲು ಬೇಕಾಗುವ ಮಾರ್ಗದಲ್ಲಿ ಏರ್‌ಸ್ಪೇಸ್‌ಗೆ ಅವಕಾಶ ಸಿಗದೇ, ಹೀಗೆ ಅಂಕುಡೊಂಕಾಗಿ ಹಾರಬೇಕು' ಎಂದು ಉತ್ತರಿಸಿದ. ಸಿಕ್ಕ ಮಾಹಿತಿ ಅನುಸಾರ, ಕೆಂಪು ಸಮುದ್ರ ಹಾಗೂ ಅಡೆನ್ ಕೊಲ್ಲಿ ಮೇಲೆ ವಿಮಾನವು ಹಾರುತ್ತ ಟೆಲ್ ಅವೀವ್ ತಲುಪುತ್ತದಂತೆ. ಹೀಗಾಗಿಯೇ ಸಮಯ ಹಾಗೂ ದೂರ ಹೆಚ್ಚು.

ಆಗಸದಲ್ಲಿಯೇ ಇಷ್ಟು ಹಗೆ ಸಾಧಿಸುವಾಗ, ನೆಲದ ಮೇಲೆ ಇನ್ನು ಹೇಗೆ ಇದ್ದೀತು?

ಸುತ್ತಲಿನ ಜೋರ್ಡಾನ್, ಈಜಿಪ್ಟ್, ಸಿರಿಯಾ ಹಾಗೂ ಲೆಬನಾನ್ ದೇಶಗಳು ಇಸ್ರೇಲ್ ಪಾಲಿಗೆ ಮಗ್ಗುಲುಮುಳ್ಳು. ಪ್ರತಿ ಕ್ಷಣವೂ ಯಾರು ಮೈಮೇಲೆ ಎರಗುತ್ತಾರೋ ಎಂಬ ಆತಂಕದಲ್ಲೇ ದಿನದೂಡಬೇಕು.

## ಅದರಲ್ಲೂ ಜೆರೂಸಲೇಮ್!

ಮೂರು ಧರ್ಮಗಳಿಗೆ ತವರು ನೆಲವಿದು. ಯಹೂದಿಗಳು ತಮ್ಮ ಮೊತ್ತಮೊದಲ ದೇಗುಲವನ್ನು ಇಲ್ಲಿ ಕಟ್ಟಿದರೆ, ಕ್ರಿಸ್ತನನ್ನು ಶಿಲುಬೆಗೆ ಏರಿಸಿದ್ದ ಈ ಸ್ಥಳ



ಶಿಥಿಲ ಕಟ್ಟಡದ ಪುನರ್ನಿರ್ಮಾಣದ ಸಂದರ್ಭದಲ್ಲಿ ಕಲ್ಲುಗಳ ಮೇಲೆ ಸಂಖ್ಯೆ ನಮೂದಿಸಿ, ಅಚ್ಚುಕಟ್ಟಾಗಿ ಹಾಗೆಯೇ ಜೋಡಿಸಲಾಗಿದೆ!